**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಹೊನ್ನಾವರ.**

**ಸಿ.ಸಿ. ನಂ. 2428/2025.**

ಪಿರ್ಯಾದುದಾರರುಃ- ಮಂಕಿ ಪೊಲೀಸ್ ಠಾಣೆ ,
ಮಂಕಿ,
ತಾಲೂಕುಃ- ಹೊನ್ನಾವರ (ಉ.ಕ.).

**- ವಿರುದ್ಧ -**

ಆರೋಪಿ:- ಮೊಹಮ್ಮದ್ ರಿಜ್ವಾನ್ ತಂದೆ ಮೀರಾ ಡಾಂಗಿ,
ವಯಸ್ಸು ಸುಮಾರುಃ- 29 ವರ್ಷ,
ವೃತ್ತಿಃ ಕ್ಯಾಂಟಿನಲ್ಲಿ ಕೆಲಸ,
ಸಾಕೀನಃ- ನಾಖುದಾಮೊಹಲ್ಲಾ, ಮಂಕಿ,
ತಾಲೂಕುಃ- ಹೊನ್ನಾವರ.

****

**ಆಪಾದನೆ.**

ಶ್ರೀ ಅನಿಲ್ ಜೋನ್ ಸಿಕ್ವೇರಾ., ಬಿ.ಬಿ.ಎ.,ಎಲ್.ಎಲ್.ಬಿ., ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾಯಿಕ ದಂಡಾಧಿಕಾರಿಯಾದ ನಾನು ಆರೋಪಿಯಾದ ನಿಮ್ಮ ಮೇಲೆ ಈ ಕೆಳಕಂಡ ಆಪಾದನೆ ಹೊರಿಸುತ್ತಿದ್ದೇನೆ.

ಮಂಕಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಬರುವ ನಿರಂಜನ ನಗರ ಹತ್ತಿರ ಹಾದು ಹೋಗಿರುವ ಎನ್.ಎಚ್-66ರ ರಸ್ತೆ ಬದಿಯ ಸರ್ವಾಜನಿಕ ಸ್ಥಳದಲ್ಲಿ, ದಿನಾಂಕಃ 14-11-2025 ರಂದು ರಾತ್ರಿ 09-10 ಗಂಟೆಗೆ ಆರೋಪಿಯು ಗಾಂಜಾ ಮಾದಕ ವಸ್ತು ಸೇವನೆ ಮಾಡಿದ ಬಗ್ಗೆ ಅನುಮಾನದ ಮೇಲೆ ಪಿರ್ಯಾದಿಯವರು ಸಿಬ್ಬಂದಿಗಳೊಂದಿಗೆ ದಾಳಿ ಮಾಡಿ, ವೈದ್ಯಕೀಯ ಪರೀಕ್ಷೆ ಮಾಡಿದ್ದು, ಗಾಂಜಾ ಸೇವನೆ ಮಾಡಿರುವುದು ದೃಡಪಟ್ಟಿರುವುದರಿಂದ, ಈ ಮೂಲಕ ಆರೋಪಿಯಾದ ನೀವು

**ಎನ್.ಡಿ.ಪಿ.ಎಸ್ ಕಾಯ್ದೆ 27(ಬಿ)** ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರೆಂದು ಆರೋಪಿಸಲಾಗಿದೆ.

ಪ್ರಶ್ನೆ1: ಈಗ ನಿಮಗೆ ಓದಿ ಹೇಳಿದ ಆಪಾದನೆ ತಿಳಿಯಿತೇ?

ಆರೋಪಿಯ ಉತ್ತರ : ತಿಳಿಯಿತು

ಪ್ರಶ್ನೆ 2: ಸದ್ರಿ ಆಪಾದನೆಯನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗಬೇಕೇ ?

ಆರೋಪಿಯ ಉತ್ತರ : ಒಪ್ಪಿಕೊಳ್ಳುತ್ತೇನೆ

(ಈ ಮೂಲಕ ಪ್ರಮಾಣಿಸುವುದೇನೆಂದರೆ ಆರೋಪಿಯು ಕೊಟ್ಟಂತ ಹೇಳಿಕೆಯ ಉತ್ತರವನ್ನು ಪಡೆಯಲಾಗಿದೆ )

ಸಹಿ ಇದೆ/-

**ದಿನಾಂಕ** 13-03-2026.

**(ಅನಿಲ್ ಜೋನ್ ಸಿಕ್ವೇರಾ).,**
**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಮ್.ಎಫ್.ಸಿ.ರವರ ನ್ಯಾಯಾಲಯ.,ಹೊನ್ನಾವರ.**

| | |
|---|---|
| ಆರೋಪಿಯ ಸಹಿಃ- | ಸಹಿ ಇದೆ |

****